ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲು ವಾದಿ ಪರ ವಕೀಲರಿಂದಃ-

ನಿಮ್ಮ ತಂದೆ ಮತ್ತು ನಿಮ್ಮ ಚಿಕ್ಕಪ್ಪನವರು ಮಾಡಿಕೊಂಡ ವಿಭಾಗ ಪತ್ರದಲ್ಲಿ ದಾವಾ ಆಸ್ತಿಯನ್ನು ಸೇರಿಸಿದ್ದಾರೋ ಇಲ್ಲವೋ ಎಂಬ ಬಗ್ಗೆ ನನಗೆ ಗೊತ್ತಿಲ್ಲ. ನಿಮ್ಮ ತಂದೆ ಮತ್ತು ನಿಮ್ಮ ಚಿಕ್ಕಪ್ಪನವರು ಮಾಡಿಕೊಂಡ ವಿಭಾಗ ಪತ್ರದಲ್ಲಿ ದಾವಾ ಆಸ್ತಿಯನ್ನು ಸೇರಿಸಿಲ್ಲ ಎಂದರೆ ನನಗೆ ಗೊತ್ತಿಲ್ಲ. ದಾವಾ ಆಸ್ತಿ ಈಗಲೂ ಒಟ್ಟು ಕುಟುಂಬದ ಆಸ್ತಿ ಎಂದರೆ ಸರಿಯಲ್ಲ. ಈಗಲೂ ದಾವಾ ಆಸ್ತಿ ಪಿತಾರ್ಜಿತ ಆಸ್ತಿಯಾಗಿ ಉಳಿದುಕೊಂಡಿದೆ ಎಂದರೆ ಸರಿಯಲ್ಲ. ನಿಮ್ಮ ತಂದೆ ಮತ್ತು ನಿಮ್ಮ ಚಿಕ್ಕಪ್ಪನವರು ದಾವಾ ಆಸ್ತಿಯನ್ನು ಭಾಗ ಮಾಡಿಕೊಂಡಿಲ್ಲದೇ ಇರುವುದರಿಂದ ಈಗ ನಾವು ಅಣ್ಣ ತಮ್ಮಂದಿರ ಭಾಗ ಮಾಡಿಕೊಳ್ಳುವ ಹಕ್ಕು ಬರುವುದಿಲ್ಲ ಎಂದರೆ ಸರಿಯಲ್ಲ. ಅದೇ ಕಾರಣ ನಮಗೆ ಮಾಲೀಕತ್ವ ಸಹ ಬರುವುದಿಲ್ಲ ಎಂದರೆ ಸರಿಯಲ್ಲ. ನನಮ್ಮ ತಂದೆ ತೀರಿಕೊಂಡ ನಂತರ ಭಾಗ ಬಂದಿರುತ್ತದೆ ಎಂದು ನುಡಿಯುತ್ತಾರೆ. ನಿಮ್ಮ ತಂದೆ ಮತ್ತು ನಿಮ್ಮ ಚಿಕ್ಕಪ್ಪನವರು ಭಾಗ ಮಾಡಿಕೊಳ್ಳದೇ ಇರುವುದರಿಂದ ವಾದಿಗೂ ಸಹ 1/5 ಭಾಗದ ಹಕ್ಕು ಇದೆ ಎಂದರೆ ಸರಿಯಲ್ಲ. ನಾನು ಮತ್ತು ನನ್ನ ಅಣ್ಣ ತಮ್ಮಂದಿರು ಸೇರಿಕೊಂಡು ವಾದಿಗೆ ಮೋಸ ಮಾಡುವ ಉದ್ದೇಶದಿಂದ ಸುಳ್ಳು ದಾಖಲೆಗಳನ್ನು ಸೃಷ್ಟಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಸುಳ್ಳು ದಾಖಲೆಗಳ ಆಧಾರದ ಮೇಲೆ ದಾನ ಪತ್ರವನ್ನು ಸೃಷ್ಟಿಸಿರುತ್ತೇವೆ ಎಂದರೆ ಸರಿಯಲ್ಲ.

ವಾದಿಗೆ ಕಣ್ಣು ಕಾಣಿಸುವುದಿಲ್ಲ ಕಿವಿ ಕೇಳಿಸದೇ ಇರುವ ಕಾರಣ ಮತ್ತು ವಯಸ್ಸಾಗಿರುವ ಕಾರಣ ಗಂಡು ಮಕ್ಕಳು ಇಲ್ಲದೇ ಇರುವ ಕಾರಣ ಅವರಿಗೆ

ಯಾವುದೇ ಮಾಹಿತಿ ನೀಡದೇ ನಮ್ಮ ಅನುಕೂಲಕ್ಕೆ ತಕ್ಕಂತೆ ದಾಖಲೆಗಳನ್ನು ಸೃಷ್ಟಿಸಿರುತ್ತೇವೆ ಎಂದರೆ ಸರಿಯಲ್ಲ. ವಾದಿಗೆ ಯಾವುದೇ ವಿಚಾರಗಳನ್ನು ತಿಳಿಸದೇ ಎಲ್ಲಾ ವ್ಯವಹಾರ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಗೆದ್ದಲು ಭೂಮಿ ಬರೆಸಿಕೊಂಡ ಬಗ್ಗೆ ದಾಖಲೆ ಹಾಜರುಪಡಿಸಿರುತ್ತೇನೆ. ನಾನು ಮತ್ತು ನನ್ನ ಅಣ್ಣ ತಮ್ಮಂದಿರು ಸೇರಿ ವಾದಿಗೆ ಮೋಸ ಮಾಡುವ ಉದ್ದೇಶದಿಂದ ಸುಳ್ಳು ದಾಖಲೆಗಳನ್ನು ಹಾಜರುಪಡಿಸಿ ಸುಳ್ಳು ಸಾಕ್ಷಿ ನಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಗೆ ಭಾಗದ ಹಕ್ಕು ಇರುವ ಕಾರಣ ಕಾನೂನು ಬಾಹಿರವಾಗಿ ವಿಭಾಗ ಮಾಡಿಕೊಂಡು ಖಾತೆ ವರ್ಗಾವಣೆ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಬದಲಾವಣೆ ಗಳು ವಾದಿಗೆ ಬಾದಕಾವಗುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿ ಪಿತ್ರಾರ್ಜಿತ ಆಸ್ತಿಯಾಗಿರುವ ಕಾರಣ ವಾದಿಗೂ ಸಹ ಭಾಗದ ಹಕ್ಕು ಇದೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ- ಇಲ್ಲ

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

(ನಿವೇದಿತ ಟಿ.ಎಂ.)
1ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,
ರಾಮನಗರ.

ಡಿ.ಡಬ್ಲೂ -1(ನಾಗಣ್ಣ)